3	ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ	2.68
4	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ	9.97
5	ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ	11.27
	ಒಟ್ಟು	**41.17**

ಈ) ಮರು ಹೊಂದಾಣಿಕೆಯು ಪೂರ್ಣವಾಗಿ ಆಗಿರುತ್ತದೆ.

4774(5637) **ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ)** : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಕಾನೇಶುಮಾರಿ ಜಾಗದಲ್ಲಿ ರೈತರು ಬೆಳೆದ ಮರಗಳ ಕಡಿತಲೆಗೆ ಅನುಮತಿ ನೀಡುವ ಅಧಿಕಾರ ಯಾರಿಗೆ ನೀಡಲಾಗಿದೆ ; ಇದಕ್ಕೆ ಅನುಸರಿಸುತ್ತಿರುವ ಮಾನದಂಡಗಳೇನು ;

ಆ) ಅನುಮತಿಗಾಗಿ ಎಷ್ಟು ಅರ್ಜಿಗಳು ಯಾವಾಗಿನಿಂದ ಬಾಕಿ ಇದೆ;

ಇ) ಕಳೆದ ಮೂರು ವರ್ಷಗಳಿಂದ ಕಡಿತಲೆಗೆ ಅನುಮತಿ ನೀಡಿದ ಪ್ರಕರಣಗಳು ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

ಈ) ಕಾನೇಶುಮಾರಿ ಮರಗಳ ಕಡಿತಲೆಗೆ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿಗಳು ಕೂಡ ಅನುಮತಿ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಉ) ಬಂದಿದ್ದಲ್ಲಿ, ಇದು ನಿಯಮದ ಪ್ರಕಾರ ಸರಿಯೇ ಸರಿಯಲ್ಲದಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಊ) ಅನುಮತಿ ನೀಡಲು ಈಗಿರುವ ವಿಧಾನದಿಂದ ರೈತರಿಗೆ ತೊಂದರೆಯಾಗುತ್ತಿದ್ದು, ಇದನ್ನು ಸರಳೀಕರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಇದ್ದಲ್ಲಿ ಯಾವಾಗ ಸರಳೀಕರಿಸಲಾಗುವುದು ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ)ಕಾನೇಶುಮಾರಿ ಪ್ರದೇಶದಲ್ಲಿರುವ ಮರಗಳ ಕಡಿತಲೆಗೆ ಅನುಮತಿ ನೀಡುವ ಅಧಿಕಾರವು ಕರ್ನಾಟಕ ಮರ ಸಂರಕ್ಷಣಾ ಕಾಯ್ದೆ 1976ರ ಪ್ರಕಾರ ವೃಕ್ಷಾಧಿಕಾರಿಗಳಾಗಿ ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿ / ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಇರುತ್ತದೆ.

ಕಡಿತಲೆಗೆ ಕೋರಿದ ಮರಗಳು ಅರ್ಜಿದಾರರಿಗೆ ಸೇರಿದೆಯೇ, ಕಾನೇಶುಮಾರಿ ಜಾಗದ ಒಳಗಡೆ ಬರುವುದೇ ಎಂಬ ಬಗ್ಗೆ ಅಭಿಪ್ರಾಯವನ್ನು ತಾಲ್ಲೂಕು ಪಂಚಾಯತ್‌ನಿಂದ ಪಡೆದು, ತಾಲ್ಲೂಕು ಸರ್ವೆ ಮಾಡಿಸಿದ ನಂತರ ಮರ ಸಂರಕ್ಷಣಾ ಕಾಯ್ದೆ ವಿಧಿ 8ರ ಪ್ರಕಾರ ಪರಿಶೀಲಿಸಿ ಮರಗಳ ಕಡಿತಲೆಗೆ ಅನುಮತಿಸಲಾಗುವುದು.

ಆ) ಈ ಕೆಳಕಂಡ ವಿಭಾಗಗಳಲ್ಲಿ ಕಾನೇಶುಮಾರಿ ಜಾಗದಲ್ಲಿ ಬೆಳೆದ ಮರಗಳ ಕಡಿತಲೆಗೆ ಅನುಮತಿ ಕೋರಿ ಬಂದ ಅರ್ಜಿಗಳು ಬಾಕಿ ಇರುತ್ತದೆ.

ಶಿವಮೊಗ್ಗ	ಸಾಗರ	ಭದ್ರಾವತಿ	ವನ್ಯಜೀವಿ
10	7	–	–

ಇ) ಈ ಕೆಳಕಂಡ ವಿಭಾಗಾವಾರು ಮತ್ತು ತಾಲ್ಲೂಕುವಾರು ನಮೂದಿಸಿದೆ.

ವಿಭಾಗ	ತಾಲ್ಲೂಕು	2002–03 (ಪ್ರಕರಣ)	2003–04 (ಪ್ರಕರಣ)	2004–05 (ಪ್ರಕರಣ)
ಸಾಗರ	ಸಾಗರ	93	53	101
	ಹೊಸನಗರ	03	13	10
	ಸೊರಬ	172	105	127
	ಶಿಕಾರಿಪುರ	28	35	23
ಶಿವಮೊಗ್ಗ	ಶಿವಮೊಗ್ಗ	03	05	07
	ತೀರ್ಥಹಳ್ಳಿ	20	31	32
	ಹೊಸನಗರ	24	22	22
ಭದ್ರಾವತಿ		–	–	–
ಶಿವಮೊಗ್ಗ ವನ್ಯಜೀವಿ	ಹೊಸನಗರ	–	07	08
	ತೀರ್ಥಹಳ್ಳಿ	–	–	01

ಈ) ಇಂತಹ ಪ್ರಕರಣಗಳು ಯಾವುದೂ ಕಂಡುಬಂದಿರುವುದಿಲ್ಲ.

ಉ) ಅನ್ವಯಿಸುವುದಿಲ್ಲ.

ಊ) ಕರ್ನಾಟಕ ವೃಕ್ಷ ಸಂರಕ್ಷಣಾ ಅಧಿನಿಯಮ 1976ರ ಉಪಬಂಧಗಳನ್ನು ಸರಳೀಕರಿಸಲು ಸರ್ಕಾರವು ಪರಿಶೀಲನೆ ಮಾಡುತ್ತಿದೆ.